<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

**<u>ಸಿ.ಸಿ.ಸಂಖ್ಯೆ:2308/2024</u>**

<u>ಪಿರ್ಯಾದಿ</u> : ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸ್ ಠಾಣೆ,
ಮೂಡಿಗೆರೆ ತಾಲ್ಲೂಕು.

ವಿರುದ್ಧ

<u>ಆರೋಪಿ</u> : ಪಿ.ಜಿ.ಮಹೇಶ್, ವಯಸ್ಸು 50 ವರ್ಷ,
ಬಿನ್ ದಿಃ ಜುಂಜೇಗೌಡ,
ವಾಸಃ ಪುರ ಗ್ರಾಮ, ಕಸಬಾ ಹೋಬಳಿ,
ಮೂಡಿಗೆರೆ ತಾಲ್ಲೂಕು.

<u>ದೋಷಾರೋಪಣೆ</u>

ಶ್ರೀ. ವಿಶ್ವನಾಥ್ ಎ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕ 12.08.2024 ರಂದು ಬೆಳಗ್ಗೆ ಸುಮಾರು 9.30 ರ ಸಮಯದಲ್ಲಿ ಮೂಡಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಗೌತಹಳ್ಳಿ ಗ್ರಾಮದಲ್ಲಿ ಆರೋಪಿಯಾದ ನೀವು ನಿಮ್ಮ ಮಾಲೀಕತ್ವದ ಬಕ್ಕಿ ಗ್ರಾಮದ ಸರ್ವೇ ನಂಬರ್ 50/5 ರ ಕಾಫೀ ತೋಟದಲ್ಲಿ ಮರದ ಮರಗಸಿ ಕೆಲಸ ಮಾಡುವಂತೆ ಚಾಸಾ-1 ಪೂರ್ಣೇಶ್, ಚಾಸಾ2-ಮಂಜುನಾಥ, ಚಾಸಾ3-ವಸಂತ ಮತ್ತು ಚಾಸಾ4-ಸುರೇಶ್ ರವರಿಗೆ ಯಾವುದೇ ಸುರಕ್ಷತಾ ಕ್ರಮವನ್ನು ಕೈಗೊಳ್ಳದೇ ತೋಟದಲ್ಲಿ ಕೆಲಸ ಮಾಡಿಸಿದ್ದ ಪರಿಣಾಮ ಚಾಸಾ2 ರವರು ಮರದಿಂದ ಸುಮಾರು 30 ರಿಂದ 35 ಅಡಿ ಎತ್ತರದಿಂದ ನೆಲಕ್ಕೆ ಬಿದ್ದು ಅವರ ಸೊಂಟ, ಬೆನ್ನು ಮೂಳೆ, ಎದಭಾಗ ಮತ್ತು ಎರಡೂ ಕೈಗಳಿಗೂ ತೀವ್ರ ಸ್ವರೂಪದ ಗಾಯ ಉಂಟಾಗಲು ಕಾರಣರಾಗಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **125(ಬಿ)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ***?*** ಅವುಗಳು ನಿಮಗೆ ಅರ್ಥವಾಯಿತೇ***?***

ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ***?***

ಉತ್ತರಃ

***(***ಆರೋಪಿಗೆ ದಿನಾಂಕ 28.04.2025 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ***,*** ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು***.*** ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ***)***

Sd/-

ಮೂಡಿಗೆರೆ
ದಿನಾಂಕಃ 28.04.2025.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.